ಫೇಸ್‌ಬುಕ್... ಟ್ವಿಟರ್ ಎಲ್ಲೆಡೆ ಅದೇ ಸಿಡಿಯ ಮಾತು ಸಿಡಿಯುತ್ತಿತ್ತು. ವಿರೋಧ ಪಕ್ಷ ಇದೇ ಸುದ್ದಿಯನ್ನು ಹಿಡಿದು ಆಡಳಿತ ಪಕ್ಷವನ್ನು ಹಣಿಯತೊಡಗಿದರೆ... ಸರ್ಕಾರದಲ್ಲಿ ಮುಖ್ಯಮಂತ್ರಿ ಆದಿಯಾಗಿ ಎಲ್ಲರೂ ಜಗದೀಶಚಂದ್ರ ಅವರನ್ನು ಬಚಾವ್ ಮಾಡಲು ಪ್ರಯತ್ನಿಸುತ್ತಿದ್ದರು. ಸರ್ಕಾರದ ನಡೆ ಜನಕ್ಕೆ ಆಶ್ಚರ್ಯ ತಂದರೂ ಯಾರೂ ತಲೆ ಕೆಡಸಿಕೊಳ್ಳಲಿಲ್ಲ. ಎಲ್ಲರಿಗೂ ಅವತ್ತಿಗೆ ಜಗಿಯಲು ಮಸಾಲೆ ಸುದ್ದಿ ಸಿಕ್ಕಿತ್ತು.

ಇದರ ಮಧ್ಯದಲ್ಲಿಯೇ ಜಗದೀಶಚಂದ್ರ ಅವರ ವಕೀಲ ಕೋರ್ಟ್‌ಗೆ ಹೋಗಿ ಆ ಸಿಡಿಯನ್ನು ಎಲ್ಲಿಯೂ ಪ್ರಸಾರ ಮಾಡಬಾರದೆಂದು ತಡೆಯಾಜ್ಞೆ ತಂದರು. ಅಲ್ಲಿಗೆ ಪ್ರಸಾರ ನಿಂತರೂ ಪ್ರಚಾರ ನಿಲ್ಲದು, ಜನರು ಅದರ ಬಗ್ಗೆ ಮಾತನಾಡುವುದು ನಿಲ್ಲುವುದಿಲ್ಲ ಎಂಬುದು ಎಲ್ಲರಿಗೂ ತಿಳಿದಿತ್ತು.

ಸಾಯಂಕಾಲ ಸುಮಾರು ಆರು ಗಂಟೆಗೆ ಜಗದೀಶಚಂದ್ರ ಅವರ ಖಾಸಗಿ ಫೋನ್‌ಗೆ ಒಂದು ಕರೆಬಂದಿತು. ಅದು ಡ್ರೈವರ್! "ನೋಡಿದಿರಾ ಸಾರ್... ನಾನ್ ಏನು ಕೇಳಿದೆ, ಸಂಬಳ ಹೆಚ್ಚು ಮಾಡಿ ಅಂತ. ನೀವು ಮಾಡಲಿಲ್ಲ. ನೋಡಿ ಈಗ ನಿಮ್ಮ ಮಾನ ಮರ್ಯಾದೆ ಹರಾಜಾಯಿತು. ನನಗೆ ಇಪ್ಪತ್ತೈದು ಲಕ್ಷ ಕೊಟ್ಟರೆ ಮತ್ತೆ ಯಾವತ್ತೂ ನಿಮ್ಮ ತಂಟೆಗೆ ಬರಲ್ಲ... ನೋಡಿ ಏನು ಮಾಡ್ತೀರಾ ಅಂತಾ..." ಎಂದು ಫೋನ್ ಇಟ್ಟ. ಅವನ ಫೋನ್ ಟ್ರ್ಯಾಕಿಂಗ್‌ನಲ್ಲಿ ಇದೆ ಎಂದು ಅವನಿಗೆ ತಿಳಿದಿರಲಿಲ್ಲ. ಅರ್ಧ ಗಂಟೆಯಲ್ಲಿ ಜಗದೀಶಚಂದ್ರ ಅವರ ಮೊಬೈಲ್‌ಗೆ ಮೆಸೇಜ್ ಬಂತು– "ಡ್ರೈವರ್ ಅರೆಸ್ಟ್ ಆಗಿದ್ದಾನೆ..."

ಜಗದೀಶಚಂದ್ರ ಸ್ವಲ್ಪ ನಿರಾಳವಾದರು. ತಕ್ಷಣ ಕಮಿಷನರ್‌ಗೆ ಫೋನಾಯಿಸಿ, "ಗುಡ್ ಜಾಬ್... ಎಫ್‌ಐಆರ್ ಹಾಕುವ ಅಧಿಕಾರಿ ಯಾರು ಹಾಗೂ ಆ ಸ್ಪೆಷಲ್ ಟೀಂನ ಹೆಡ್ ಶಿವಣ್ಣ ಇಬ್ಬರನ್ನೂ ನಮ್ಮ ಮನೆಗೆ ಆ ಡ್ರೈವರ್ ಜೊತೆಯಲ್ಲಿ ಕಳುಹಿಸಿ. ನಾನು ಮಾತಾಡಬೇಕು..." ಅಧಿಕಾರದ ದರ್ಪ ಅವರ ಮಾತಿನಲ್ಲಿ ವ್ಯಕ್ತವಾಗುತ್ತಿತ್ತು.

ತಕ್ಷಣ ಇನ್ನೊಂದು ಫೋನ್‌ನಿಂದ ಸಿಎಂ ಆಪ್ತ ಕಾರ್ಯದರ್ಶಿಗೆ ಫೋನ್ ಮಾಡಿದರು– "ಸಾಹೇಬರಿಗೆ ತಿಳಿಸಿಬಿಡಿ, ಡ್ರೈವರ್ ಅರೆಸ್ಟ್ ಆಗಿದ್ದಾನೆ ಅಂತ. ಮುಂದಿನದನ್ನು ನಾನೇ ನೋಡಿಕೊಳ್ಳುತ್ತೇನೆ.'' ಅಷ್ಟರಲ್ಲಿ ಫೋನ್ ಸಿಎಂ ಕೈ ಸೇರಿತ್ತು.

"ಜಗದೀಶಚಂದ್ರ ಅವರೇ... ಮುಂದೆ ಹೇಗೆ? ಆಗಲೇ ಇದರ ಬಗ್ಗೆ ತಲೆಗೆ ಒಂದು ಮಾತಾಡುತ್ತಿದ್ದಾರೆ. ಠಾಣೆಗೆ ನೀವೇ ಹೋಗಿ ಕಂಪ್ಲೇಂಟ್ ಕೊಟ್ಟಿದ್ದೀರಿ. ಜನ ತಲೆಗೆ ಒಂದರಂತೆ ಮಾತನಾಡುತ್ತಿದ್ದಾರೆ. ಇದರಿಂದಾಗಿ ಸರ್ಕಾರಕ್ಕೆ ಮುಜುಗರ. ನನಗೂ ಕೂಡಾ..."

ಮುಖ್ಯಮಂತ್ರಿಗಳೆ ಮಾತಾಡಿದ್ದು ಆಶ್ಚರ್ಯವಾದರೂ, "ಸರ್, ಹೆದರಬೇಕಿಲ್ಲ. ಡ್ರೈವರ್ ಸಿಕ್ಕಿದ್ದಾನೆ. ಅರೆಸ್ಟ್ ಮಾಡಿ ಎಫ್‌ಐಆರ್ ಹಾಕಲಿ. ಮುಂದಿನದು ನನಗೆ ಬಿಡಿ. ಹಾಂ ನಾನು ನನ್ನ ರಾಜೀನಾಮೆ ಕಳುಹಿಸುತ್ತಿದ್ದೇನೆ. ಅದನ್ನು ಪ್ರೆಸ್‌ಗೆ ನಾನೇ ಹೇಳುತ್ತಿದ್ದೇನೆ. ಮುಂದಿನದು ನಿಮ್ಮ ವಿವೇಚನೆಗೆ ಬಿಟ್ಟಿದ್ದು..."

ಸಿಎಂ ಮಾತನಾಡದೇ ಫೋನ್ ಇಟ್ಟರು. ವಿಷಯದ ಗಂಭೀರತೆ ಅರಿತಿದ್ದ ಅವರಿಗೆ ಈ ಸಂದರ್ಭವನ್ನು ನಿಭಾಯಿಸಲು ಜಗದೀಶಚಂದ್ರರೇ ಸರಿ ಎಂಬ ನಂಬಿಕೆ ಇತ್ತು. ಯಾಕೆಂದರೆ, ವಿಷಯ ಅತ್ತಿತ್ತ ಆಗುವುದರಿಂದ ಆಗುವ ಪರಿಣಾಮ ಅವರಿಗೂ ಗೊತ್ತಿತ್ತು. ರಾಜಕೀಯದಲ್ಲಿ ಸಣ್ಣ ವಿಷಯವನ್ನೂ ಬೃಹದಾಕಾರವಾಗಿ ಬೆಳೆಸಬಹುದು. ಹಾಗೇ ಸರಿಯಾಗಿ ನಿಭಾಯಿಸಿದರೆ ದೊಡ್ಡ ದೊಡ್ಡ ಕಷ್ಟಗಳನ್ನು ತರಗೆಲೆಗಳಂತೆ ಹಾರಿಸಿ ಬಿಡಬಹುದು.